# ಹಾದರದ ವಾರಸುದಾರ

"ಅದೋ. ಅಲ್ಲಿದ್ದಾನೆ ನೋಡು. ಬಿಳೀ ಗೆರೆ ಗೆರೆ ಷರಟು. ಹಳದಿ ಪ್ಯಾಂಟು. ಅವನೇ. ಜೊತೆಗಿರೋದು ಅವನ ಲಾಯರು" ಎಂದು ಸತೀಶ ಕೈ ತೋರಿಸದೆ ಅಸಹನೆಯಿಂದಲೇ ಅನೀಶನಿಗೆ ಮಾತಿನಲ್ಲೇ ಬೆರಳು ಮಾಡಿದ.

ಸತೀಶ ತೋರಿಸಿದ ವ್ಯಕ್ತಿ ಕೋರ್ಟಿನ ಆವರಣದಲ್ಲೇ ಮತ್ತೊಂದು ಬದಿಗೆ ಸೈಕಲ್ಲುಗಳನ್ನು ಒರಗಿಸಿದ್ದ ಗೋಡೆಯ ಬಳಿ ನಿಂತಿದ್ದ. ಅವನ ಹಿಂದೆ ಇದ್ದ ಕೋರ್ಟು ಕಟ್ಟಡದ ಹಳೆಯ ಸೂರು ವ್ಯಾಜ್ಯಗಳನ್ನು ಕೇಳಿ ಕೇಳಿ ಬಸವಳಿದು ನೆಲದತ್ತ ಮುಖ ಮಾಡಿದಂತೆ ಕಾಣುತ್ತಿತ್ತು. ನೂರು ವರ್ಷಗಳಾಗಿರಬಹುದೇನೋ ಆ ಕಟ್ಟಡಕ್ಕೆ. ಈಸ್ಟ್ ಇಂಡಿಯಾ ಕಂಪೆನಿ ಇದ್ದ ಕಾಲದಲ್ಲಿ ಕಟ್ಟಿದ ಕಟ್ಟಡ, ಈಗಲೂ ವ್ಯಾಜ್ಯಗಳಿಗೆ ಸಾಕ್ಷಿಯಾಗುಳಿದಿತ್ತು.

"ಹಾದರಕ್ಕೆ ಹುಟ್ಟಿದವನು," ಅನೀಶ ತುಸು ಜೋರಾಗೇ ಗೊಣಗಿದ. ಇನ್ನೇನಾದರೂ ಹೇಳುತ್ತಿದ್ದನೇನೋ? ತನ್ನ ಮಾತಿನಲ್ಲಿ ಇದ್ದ ವಿಪರ್ಯಾಸವನ್ನು ಗಮನಿಸಿ ಥಟ್ಟನೆ ಸುಮ್ಮನಾದ.

"ಅಲ್ಲಣ್ಣ. ಇಷ್ಟು ದೂರ ಬರೋದಿಕ್ಕೆ ಹ್ಯಾಗೆ ಬಿಟ್ಟೆ? ಅಪ್ಪ ಇದ್ದಿದ್ದರೆ ಹೀಗಾಗುತ್ತಿತ್ತಾ?"

ಅನೀಶನ ಮಾತು ಸತ್ಯವೇ. ರಾವ್‌ಬಹದ್ದೂರ್ ಸಾಹೇಬರು ಇದ್ದಿದ್ದರೆ ಬಹುಶಃ ಈ ವ್ಯಾಜ್ಯ ಕೋರ್ಟು ಮೆಟ್ಟಿಲು ಏರುತ್ತಲೇ ಇರಲಿಲ್ಲ. ಅವರದ್ದು ಅಂತಹ ವ್ಯಕ್ತಿತ್ವ. ಸತ್ತು ಹತ್ತು ವರ್ಷಗಳಾಗಿದ್ದರೂ ಅವರು ಈಗಲೂ ರಾವ್‌ಬಹದ್ದೂರರೇ. ಸಾಹುಕಾರರೇ. ಸ್ವಾತಂತ್ರ್ಯ ಬಂದು ಜಮೀನುದಾರಿಕೆಯೆಲ್ಲ ಗಾಳಿಗೆ ತೂರಿ ಹೋದ ಮೇಲೂ ಅವರ ಆಸ್ತಿ ಪಾಸ್ತಿ ಹಾಗೂ

